**<u>ದಿನಾಂಕ 19.12.2020 ರಂದು ಪ್ರಕರಣವನ್ನು ಲೋಕ ಅದಾಲತ ಮುಂದೆ ವಿಡಿಯೋ ಕಾನ್ಫರೆನ್ಸ ಮೂಲಕ ಕೂಗಿಸಲಾಯಿತು.</u>**

ಅರ್ಜಿದಾರರು, ಎದುರುದಾರರು ಮತ್ತು ಅರ್ಜಿದಾರರ ಪರ ವಕೀಲರು ಹಾಜರಿರುತ್ತಾರೆ. ಉಭಯ ಪಕ್ಷಗಾರರನ್ನು ವಿಡಿಯೋ ಕಾನ್ಫರೆನ್ಸ ಮೂಲಕ ರಾಜಿ ಸಂಧಾನದ ಮಾತುಕತೆಗೆ ಒಳಪಡಿಸಲಾಯಿತು.

ಉಭಯ ಪಕ್ಷಗಾರರು ಸದರಿ ರಾಜಿ ಸಂಧಾನವನ್ನು ಒಪ್ಪಿ ಒಂದು ಜಂಟಿ ಮೆಮೊವನ್ನು ಸಲ್ಲಿಸಿ ಪ್ರಸ್ತುತ ಅರ್ಜಿಯನ್ನು ಮಾನ್ಯಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

ಜಂಟಿ ಮೆಮೊದಲ್ಲಿನ ಎಲ್ಲಾ ಅಂಶಗಳನ್ನು ಉಭಯ ಪಕ್ಷಗಾರರಿಗೆ ಅವರಿಗೆ ತಿಳಿದ ಭಾಷೆಯಾದ ಕನ್ನಡ ಭಾಷೆಯಲ್ಲಿ ಓದಿ ಹೇಳಲಾಗಿ, ಉಭಯಪಕ್ಷಗಾರರು ಒಪ್ಪಿಕೊಂಡಿರುತ್ತಾರೆ.

ಉಭಯ ಪಕ್ಷಗಾರರ ಹೇಳಿಕೆಯ ನಂತರ ಪ್ರಕರಣದ ದಾಖಲೆಗಳನ್ನು ಪರಿಶೀಲಿಸಲಾಗಿ ಅರ್ಜಿದಾರರು ಈ ಒಂದು ಅರ್ಜಿಯನ್ನು ತನ್ನ **ಮಗಳಾದ ಲಕ್ಷ್ಮೀ ತಂದೆ ಯಲ್ಲಪ್ಪ ಇವರ ಜನ್ಮ ದಿನಾಂಕ 07.12.2006ನ್ನು** ಎದುರುದಾರರ ಕಚೇರಿಯಲ್ಲಿರುವ ಜನನ ಮತ್ತು ಮರಣ ನೊಂದಣಿ ಪುಸ್ತಕದಲ್ಲಿ ನೊಂದಾಯಿಸಲು ಕೋರಿಕೊಂಡಿರುತ್ತಾರೆ.

ಈ ದಿನ ಎದುರುದಾರರು ಸಹ ಹಾಜರಾಗಿ ಅರ್ಜಿದಾರರ ಮಗಳ/ಮಗನ ಜನನ ದಿನಾಂಕವನ್ನು ನಮೂದಿಸಿಕೊಳ್ಳಲು ಒಪ್ಪಿಕೊಂಡಿರುತ್ತಾರೆ.

ಈ ಹಂತದಲ್ಲಿ ಉಭಯಪಕ್ಷಗಾರರು ಸಲ್ಲಿಸಿದ ಈ ಜಂಟಿ ಮೆಮೊವನ್ನು ಮಾನ್ಯಗೊಳಿಸಿದಲ್ಲಿ ಯಾವುದೆ ಪಕ್ಷಗಾರರಿಗೆ ನಷ್ಟ ಉಂಟಾಗುವುದಿಲ್ಲ, ಆದ್ದರಿಂದ ಈ ಕೆಳಗಿನಂತೆ ಆದೇಶ.

# <u>ಆದೇಶ</u>

ಉಭಯ ಪಕ್ಷಗಾರರು ಸಲ್ಲಿಸಿದ ಜಂಟಿ ಮೆಮೊವನ್ನು ಪುರಸ್ಕರಿಸಲಾಗಿ.

ಎದುರುದಾರರು ಅರ್ಜಿದಾರರ **ಮಗಳಾದ ಲಕ್ಷ್ಮೀ ತಂದೆ ಯಲ್ಲಪ್ಪ ಇವರ ಜನ್ಮ ದಿನಾಂಕ 07.12.2006ನ್ನು** ತಮ್ಮ ಕಚೇರಿಯಲ್ಲಿ ನಿರ್ವಹಣೆ ಮಾಡಿದ ಜನನ ಮತ್ತು ಮರಣ ನೊಂದಣಿ ಪುಸ್ತಕದಲ್ಲಿ ಸರಿಯಾದ ಶುಲ್ಕವನ್ನು ಪಡೆದು ನೊಂದಾಯಿಸಲು ಸೂಚಿಸಲಾಗಿದೆ.

ಮುಂದುವರೆದು ಎದುರುದಾರರು ತಮ್ಮ ಜನನ ನೊಂದಣಿ ಪುಸ್ತಕದಲ್ಲಿ ಮತ್ತು ಜನನ ಪ್ರಮಾಣಪತ್ರದಲ್ಲಿ ಪ್ರಸ್ತುತ ಪ್ರಕರಣದ ಸಂಖ್ಯೆ ಮತ್ತು ಆದೇಶದ ದಿನಾಂಕವನ್ನು ನೊಂದಾಯಿಸಲು ಸೂಚಿಸಿದೆ.

ಉಭಯ ಪಕ್ಷಗಾರರು ಸಲ್ಲಿಸಿದ ಮೆಮೊ ಪ್ರಕಾರ ಈ ಅರ್ಜಿಯನ್ನು ಮುಕ್ತಾಯಗೊಳಿಸಿಲಾಗಿದೆ.

ನ್ಯಾಯಾಂಗ ಸಂಧಾನಕಾರರು

ಸಂಧಾನಕಾರರು (ವಕೀಲರು)

Coordinator.